
REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 13 | ISSUE - 8 | MAY - 2024

# ವಚನಗಳಲ್ಲಿ ಮಾನವೀಯ ಮೌಲ್ಯಗಳು

**ಡಾ. ಹನುಮಂತಪ್ಪ ಸಂಜೀವಣ್ಣನವರ**
ಸಹಾಯಕ ಪ್ರಾಧ್ಯಾಪಕರು , ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.




ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶಿವಶರಣರ ಕಾಲವು ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕವಾಗಿ ಕ್ರಾಂತಿಕಾರಿಕ ಮನೋಭಾವನೆಗಳಿಗೆ ಕಾರಣಕರ್ತರಾದವರು. ಇಂದು ಕನ್ನಡ ಸಾಹಿತ್ಯವು ಭಾರತೀಯ ಭಾಷೆ ಮತ್ತು ವಿಶ್ವ ಭಾಷೆಯಲ್ಲೂ ತನ್ನ ಸ್ಥಾನಮಾನವನ್ನು ಉನ್ನತೀಕರಿಸಿಕೊಳ್ಳಲು ಕಾರಣವಾಗಿದೆ. ಎಂದರೆ, ಅದರಲ್ಲಿ ವಚನ ಸಾಹಿತ್ಯ, ಶಿವಶರಣರ ಪರಿಶ್ರಮವು ಅತ್ಯಂತ ಮುಖ್ಯವಾದದು. ಸಮಾಜ ಮತ್ತು ವ್ಯಕ್ತಿತ್ವ ಉದಾತ್ತೀಕರಿಸಲು ಅವರು ಸಮನ್ವಯತೆಯ ಕನಸು ಕಂಡು, ಈ ನಿಟ್ಟಿನಲ್ಲಿ ಕಾರ್ಯತತ್ಪರರಾದರು. ಈ ಸಮಷ್ಠಿ ಪ್ರಜ್ಞೆಯ ಸಿದ್ಧಾಂತವು, ಭಾರತದ ಸಂಸ್ಕೃತಿ ವಲಯದಲ್ಲಿ ತನ್ನ ಚಾರಿತ್ರಿಕ ನಿಲುವಿನೊಂದಿಗೆ ಪರಂಪರೆಯಲ್ಲಿ ಅನುಸರಿಸಿಕೊಂಡು ಬಂದಿರುವ ಜಿಡ್ಡುಗಟ್ಟಿದ ಸಂಪ್ರದಾಯ ಕಟ್ಟಳೆಗಳಿಗೆ ಮುಕ್ತಿ ತೋರುವ ಮಹಾ ಪ್ರಯತ್ನವಾದಿಗಳಾಗಿದ್ದಾರೆ. ಈ ಪವಿತ್ರವಾದ ಶಕ್ತಿಯು ವಿಶ್ವದ ಅನೇಕ ಕಡೆಗಳಲ್ಲಿ ತನ್ನ ಪ್ರಭಾವ, ಪ್ರೇರಣೆಯಿಂದ ತನ್ನ ಪ್ರಜ್ವಲತೆಯನ್ನು ಸಮಾಜಕ್ಕೆ ನೀಡಿದೆ. ಈ ಪುಣ್ಯಕಾರ್ಯಕ್ಕೆ ಅನೇಕ ಶಿವಶರಣರು ತಮ್ಮ ವಚನಗಳ ಮೂಲಕ ನಡೆ–ನುಡಿ, ಆಚಾರ–ವಿಚಾರ, ಭಕ್ತಿ–ಜ್ಞಾನ, ಸಮಾನತೆಯ ಜೊತೆಗೆ ಅನೇಕ ಅಂಧಕಾರ ಮೌಢ್ಯವನ್ನು ಲಿಂಗ ಭೇದವನ್ನು ತೊಡೆದು ಹಾಕಿದರು.

ಹಿರಿಯ ಶಿವಶರಣರಾದ ಜೇಡರ ದಾಸಿಮಯ್ಯನವರು, ಮಾದರ ಚೆನ್ನಯ್ಯನವರು, ಡೋಹರ ಕಕ್ಕಯ್ಯನವರು ತಮ್ಮ ಆಲೋಚನೆಗಳನ್ನು ವಚನಗಳ ಮೂಲಕ ಪ್ರಸಾರಗೊಳಿಸುತ್ತಿದ್ದರು. ಇದರೊಂದಿಗೆ ಎರಡನೆಯ ತಲೆಮಾರಿನಲ್ಲಿ ಅಲ್ಲಮ, ಬಸವಣ್ಣ, ಮಹದೇವಿಯಕ್ಕ ಮುಂತಾದ ಶಿವಶರಣರು ಸಮಾಜದಲ್ಲಿ ತಾಂಡವವಾಡುತ್ತಿದ್ದ ವರ್ಣಬೇದ, ಲಿಂಗಭೇದ, ಜಾತಿಭೇದ ಮುಂತಾದ ಲೋಕೋಪಯೋಗಿ ಚಿಂತನೆಗಳಿಗೆ ಮಾರಕವಾದ ಅಂಶಗಳನ್ನು ಕಿತ್ತೆಸೆಯಲು ತಮ್ಮನ್ನು ತಾವು ತೊಡಗಿಸಿಕೊಂಡು ಅದಕ್ಕೊಂದು ನಿರ್ದಿಷ್ಟವಾದ ಸ್ವರೂಪವನ್ನು ನೀಡಿದರು. ಹೀಗೆ ಶಿವಶರಣರ ತತ್ವಸಿದ್ಧಾಂತಗಳು ಸಮಾಜದಲ್ಲಿ ಪಸರಿಸುವಂತಾಯಿತು. ಇಂತಹ ಕೆಲವು ಮಾನವೀಯ, ಲೋಕ ನೀತಿಯ, ಸಮಾಜ ಮತ್ತು ವ್ಯಕ್ತಿ ಸುಧಾರಣೆಯ ಅಂಶಗಳು ಅವರ ಪ್ರತಿಯೊಂದು ವಚನಗಳಲ್ಲಿ ಮೂಡಿಬಂದಿವೆ. ವಚನಗಳಲ್ಲಿ ಮಾನವೀಯ ಮೌಲ್ಯಗಳು ಸರ್ವಕಾಲಕ್ಕೂ ತಮ್ಮ ತತ್ವನಿಷ್ಠ ಅಂಶಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆಯು ಸದಾ ನಡೆಯುವ ಕಾರ್ಯವೇ ಆಗಿದೆ. ಅವುಗಳ ಕೆಲ ನೀತಿಗಳನ್ನು ಇಲ್ಲಿ ನೋಡಬಹುದಾಗಿದೆ.

ಧಾರ್ಮಿಕ ಆಚರಣೆಯ ವಿಧಿ–ವಿಧಾನದಲ್ಲಿ ಜಗತ್ತಿನಲ್ಲಿ ಮುಂಚೂಣಿಯಲ್ಲಿರುವ ದೇಶ ನಮ್ಮದು. ಬಹುಮತಗಳ ಪರಂಪರೆಯಲ್ಲಿ ಏಕತೆಯನ್ನು ಕಾಣುವ ಮತ್ತು ಅನುಸರಿಸುವ ಪೂಜ್ಯ ಭಾವನೆಯು ನಿರಂತರವಾಗಿ ನಡೆದಿದೆ ಈ ಪರಂಪರೆಯನ್ನು..

ಕಲ್ಲು ನಾಗರ ಕಂಡಡೆ ಹಾಲನೆರೆ ಎಂಬರು
ದಿಟವ ನಾಗರ ಕಂಡರೆ ಕೊಲ್ಲಂಬರಯ್ಯ
ಜಂಗಮ ಬಂದಡೆ ನಡೆಯಂಬರು
ಉಣ್ಣದ ಲಿಂಗಕ್ಕೆ ಬೋಗವ ಹಿಡಿಯಂಬವರಯ್ಯ
ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದರೆ
ಕಲ್ಲು ತಾಗಿದ ಮಿಟ್ಟಿಯಂತಪ್ಪರಯ್ಯ (ವಚನ 370)

ಪ್ರಶ್ನಿಸುವ ಬಗೆಯು ವಿಶಿಷ್ಟವಾಗಿದೆ. ಕಾರಣ ಹಿಂದೂ ಪರಂಪರೆಯಲ್ಲಿ ಸುಂದರ ಬದುಕನ್ನು ರೂಪಿಸಿಕೊಂಡಾಗಲೂ ಶರಣರು ನೀತಿ ಮಾತಿನ ಮೂಲಕ ಅದನ್ನು ಸಾಮಾನ್ಯ ರೀತಿಯಲ್ಲಿ ಕೇಳುತ್ತಾರೆ. ನಡೆದು ಬಂದ ಆಚರಣೆ ವಿಚಾರಕ್ಕೆ ಬಹುಶಃ ಯಾರು ಏನು ಪ್ರಶ್ನಿಸಕೂಡದು ಎಂಬ ಭಾವನೆಯು ಅನೇಕರಲ್ಲಿ ಕಂಡು ಬಂದಾಗಲೂ ಸರಿಯಾದ ಮಾರ್ಗವನ್ನು ವಿಚಾರಿಸಿ ಅನುಸರಿಸಲು ಕರೆ ನೀಡುತ್ತಾರೆ. ಹಸಿದ ಹೊಟ್ಟೆಗೆ ಅನ್ನ ಕೊಡದೆ ಉಣ್ಣದ ಲಿಂಗಕ್ಕೆ ನೀಡುವುದರಿಂದ... ಮತ್ತೊಂದು ಜೀವಕ್ಕೆ ಸಹಾಯವಾಗದು ಎಂಬುವುದಿ ಇವರ ಆಶಯವಾಗಿದೆ.

ಅದರಂತೆಯೇ ಈ ಮುಂದಿನ ವಚನದಲ್ಲಿ ಶರಣರು ಚಿತ್ತ–ಭಕ್ತಿ ಇಲ್ಲದ ಯಾವುದೇ ಧಾರ್ಮಿಕ ಕೇಂದ್ರಗಳನ್ನು ದೇವಸ್ಥಾನವನ್ನು ದೇವರ ಅಸ್ತಿತ್ವವನ್ನು ಪ್ರಶ್ನಿಸುವುದನ್ನು ಇಲ್ಲಿ ಕಾಣಬಹುದಾಗಿದೆ.

ಕಲ್ಲ ಮನೆಯ ಮಾಡಿ ಕಲ್ಲ ದೇವರ ಮಾಡಿ
ಆ ಕಲ್ಲು ಕಲ್ಲ ಮೇಲೆ ಕಡೆದರೆ, ದೇವರತ್ತ ಹೋದರು
ಲಿಂಗ ಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ ಗುಹೇಶ್ವರ (ವಚನ 371)

ತಪ್ಪುಗಳು ಸನಾತನ ಪರಂಪರೆಯನ್ನು ಪರಾಮರ್ಶನಕ್ಕೆ ಹಚ್ಚುತ್ತಾರೆ. ನಡೆದು ಬಂದ ಸ್ಥಾವರ ಲಿಂಗವನ್ನು ದೇವರು ಎನ್ನುವ ಪರಿಕಲ್ಪನೆಯನ್ನು ವೈಚಾರಿಕ ವಿಧಾನಕ್ಕೆ ಕರೆದುಕೊಂಡು ಹೋಗುತ್ತಾರೆ.

ಸಮಾಜದ ಕಲ್ಪನೆಯಲ್ಲಿ ದೂರವಾಗಿ ಉಳಿದಿರುವ ಸಮುದಾಯಗಳಲ್ಲಿ ಪೂರ್ತಿ ಧೈರ್ಯ ತುಂಬುವ ಕಾರ್ಯ ಈ ಕೆಳಗಿನ ವಚನದಲ್ಲಿ ನಡೆದಿದೆ.

ಕಾಲೇ ಕಂಬಗಳಾದ ವೆನ್ನ, ದೇಹವೇ ದೇಗುಲವಾಯಿತಯ್ಯ
ಎನ್ನ ನಾಲಗೆಯ ಘಂಟೆ, ಶಿರ ಸುವರ್ಣದ ಕಳಸ
ಇದೇನಯ್ಯ ಸರವೇ ಲಿಂಗಕ್ಕೆ ಸಿಂಹಾಸನವಾಗಿದ್ದಯ್ಯ
ಗುಹೇಶ್ವರ ನಿಮ್ಮ ಪ್ರಾಣ ಲಿಂಗ ಪ್ರತಿಷ್ಠೆ ಪಲ್ಲಟವಾಗದಂತಿದ್ದೇನಯ್ಯ (ವಚನ –429)

ಶರಣರಿಗೆ ಶ್ರೀಮಂತರನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ಇರುವವರನ್ನು ಕಂಡರೆ ಅಲಕ್ಷವೆಂತಲ್ಲ. ದೃಷ್ಟಿಕೋನಗಳನ್ನು, ಬದಲಾವಣೆ ಮಾರ್ಗವನ್ನು ತೋರುವ ಮಹತ್ವದ ಚಿಂತನೆಯು ಪರಿಪಕ್ವ ಮಾಡಲು ಹೊರಟ ಬಗೆಯಾಗಿದೆ. ದೇವಾಲಯಗಳು ಕೇವಲ ಒಂದು ವರ್ಗಕ್ಕೆ ಸೀಮಿತವಾದಾಗ, ಮತ್ತೊಂದು ವರ್ಗ ತುತ್ತಿನ ಚೀಲವನ್ನು ತುಂಬಿಕೊಳ್ಳುವಲ್ಲಿ ನಿರತರಾದಾಗ, ಇವರು ಇಂತಹ ಕಾರ್ಯಗಳನ್ನು ನಿರ್ಮಿಸಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ದೇವರು. ದೇವಾಲಯ. ಮಠ. ಪೂಜೆ. ಹಬ್ಬ. ಜಾತ್ರೆಗಳಲ್ಲಿ ಧಾರ್ಮಿಕ ಆಚರಣೆಗಳಲ್ಲಿ ಉಳ್ಳವರ ಪಾಲಾಗಿವೆ. ಇಲ್ಲದವರು ಇದನ್ನು ಪ್ರಶ್ನಿಸುವಂತಿಲ್ಲ, ಬಯಸುವಂತೆಯೂ ಇಲ್ಲ. ಈ ಆನಂತ ಪ್ರಜ್ಞೆಯಿಂದ ಸಾಮಾನ್ಯ ಸಮುದಾಯ ಸೊರಗಿ ಅದಃ ಪತನಕ್ಕೆ ತಲುಪಿದ ಸಂದರ್ಭವದು.

ಕೂಡಿ ಬಾಳುವ ಸಂಸ್ಕೃತಿಯನ್ನು ಶರಣರ ಸಾಮಾಜಿಕ ಜೀವದಿಂದ ಆರಂಭವಾಗಿ ಅನುಭವ ಮಂಟಪದವರೆಗೆ ಬೆಳೆದು ನಿಲ್ಲುತ್ತದೆ. ದೈನಂದಿನ ಕರ್ತವ್ಯವನ್ನು ನಿರ್ವಹಿಸುವ ಸಾಮಾನ್ಯ ಜನರು ಪರಸ್ಪರರಲ್ಲಿ ಕೂಡಿ ಬಾಳುವ ಸಂಬಂಧ ವೃದ್ಧಿಸುವ ಸಂದೇಶವು ಈ ವಚನದಲ್ಲಿ ಕಾಣಬಹುದಾಗಿದೆ.

ಕಾಗೆ ಒಂದಗಳ ಕಂಡರೆ ಕರೆಯದೆ ತನ್ನ ಬಳಗವನು
ಕೋಳಿ ಒಂದು ಕುಟುಕು ಕಂಡಡೆ ಕೂಗಿ ಕರೆಯದೆ ತನ್ನ ಕುಲವೆಲ್ಲವನ್ನು
ಶಿವಭಕ್ತನಾಗಿ ಭಕ್ತ ಪಕ್ಷವಿಲ್ಲದಿದ್ದರೆ ಕಾಗೆ ಕೋಳಿಗಿಂತ ಕರ ಕಷ್ಟ ಕೂಡಲಸಂಗಮದೇವ (ವಚನ–384 ಪುಟ–113, ವಚನ ಸಾವಿರ)

ಸ್ವಾರ್ಥ ಮನೋಭಾವನೆಯಿಂದ ಸಂಬಂಧದ ಹಂಗು ತೊರೆದುಕೊಳ್ಳುವ ಮಟ್ಟಕ್ಕೆ ನಮ್ಮ ನಮ್ಮ ಕೌಟುಂಬಿಕ, ಸಾಮಾಜಿಕ ಸಂಬಂಧಿಗಳು ಬೆಳೆದು ನಿಂತಿವೆ. ನಿಸ್ವಾರ್ಥದ ನೀತಿಯ ಬದುಕನ್ನು ಸವಿಸಬೇಕಾದ ಅನಿವಾರ್ಯತೆಯು ಸರಳ ಮತ್ತು ಸ್ಪಷ್ಟವಾಗಿ ಜೀವಿಸುವ ಪರಿಯನ್ನು ಅಳವಡಿಸಿಕೊಂಡು ಬಾಳುವ ಸಂಪ್ರದಾಯ, ಸಿದ್ಧಾಂತವು ಪ್ರತಿಯೊಬ್ಬರ ಕಾರ್ಯಕ್ಷಮತೆಯಲ್ಲಿ ಬೇರೂರಬೇಕಾದದ್ದು ಅನಿವಾರ್ಯತೆಯಿದೆ. ಇದಕ್ಕಾಗಿಯೇ ಇದ್ದವರು, ಇಲ್ಲದವರ ಕಷ್ಟದ ಸಂದರ್ಭದಲ್ಲಿ ನೆರವಾಗಿ ಮಾನವೀಯತೆಯನ್ನು ಪ್ರದರ್ಶಿಸುವ ಕಾರ್ಯದಲ್ಲಿ ನಿರತರಾಗುವುದು ಉತ್ತಮವಾದ ಮಾರ್ಗವಾಗಿದೆ.

ಪೂಜ್ಯ ಶರಣರಾದ ಆಯ್ದಕ್ಕಿ ಮಾರಯ್ಯನವರು ಕಾಯಕದಿಂದ ಸಮಾಜ ಸುಧಾರಣೆಯ ವಿಧಾನವನ್ನು ನೀಡುತ್ತಾರೆ. ಕಾಯಕವೂ ಶ್ರಮ ಸಂಸ್ಕೃತಿ, ಕಾಯಕವೇ ಸಮುದಾಯ ಮತ ಪಂಥರಹಿತವಾಗಿ ತಮ್ಮ ಇಚ್ಛೆಗನುಸಾರವಾಗಿ ಮಾಡಲು ಪ್ರೇರಣೆ ನೀಡಲಾಗುತ್ತದೆ.

ಕಾಯಕದಲ್ಲಿ ನಿರತರಾದಡೆ
ಗುರು ದರ್ಶನವಾದಡೂ ಮರೆಯಬೇಕು
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂತಿದ್ದಡೂ ಹಂಗು ಹರಿಯಬೇಕು,
ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು

ಈ ಶರಣರ ಸಿದ್ಧಾಂತ ಮೇಲು–ಕೀಳು ಎಂಬ ಭಾವನೆಯನ್ನು ಹೊಡೆದೋಡಿಸಿ ಸಮಷ್ಟಿ ಪ್ರಜ್ಞೆಯನ್ನು ಮೆರೆಯುವಂತಹ ಅನೇಕ ಸ್ಫೂರ್ತಿದಾಯಕ ಸಂದೇಶವು ಇದರಲ್ಲಿ ಅಡಕವಾಗಿರುವುದು ಗೋಚರವಾಗುತ್ತದೆ. ಹಾಗೆಯೇ ಆಡಳಿತಾತ್ಮದ ಪರಿಕಲ್ಪನೆಯನ್ನು ವಿಕಾಸ ಕಾಯಕದಿಂದ ಕೈಲಾಸವನ್ನು ಕಾಣುವ ವಿಧಾನವನ್ನು ವಿವರಿಸುತ್ತಾರೆ.

ಮಾನವ ಜೀವನದಲ್ಲಿ ಆದರ್ಶ, ಪ್ರೀತಿ, ಕರುಣೆ ಮುಖ್ಯವಾಗಿರುತ್ತದೆ. ಇದರಿಂದಲೇ ವ್ಯಕ್ತಿಯ ವ್ಯಕ್ತಿತ್ವ ನಿಚ್ಚಲವಾಗುತ್ತದೆ. ಇಂತಹ ಮೌಲ್ಯಗಳು ಇಲ್ಲದಿದ್ದರೆ ಅವರು ಮನುಷ್ಯರಷ್ಟೇ ಆಗಿರುತ್ತಾರೆ ಮತ್ತು ಮನುಷ್ಯರಾಗಿ ಬದುಕುತ್ತಾರೆ. ಆದರ್ಶವಂತರಾಗಿರಲು ಆಗದು. ಹಾಗಾಗಿ ಕಾಯಕದಿಂದ ಹಸಿದವರಿಗೆ, ಶಕ್ತಿಹೀನರಿಗೆ, ಅಸಹಕರಿಗೆ ದಾಸೋಹ ಮಾಡುವ ಪರೋಪಕಾರದ ಚಿಂತನೆಯನ್ನು ಅವರು ಹೇಳುತ್ತಾರೆ. ಇಂತಹ ಆದರ್ಶಗಳು ಪ್ರಾಣಿ, ಪಕ್ಷಿಗಳಲ್ಲಿ ಕಾಣಬಹುದಾಗಿದೆ.

ಕಾಗೆಯ ಮರಿ ಕೋಗಿಲೆ ಎಂದಾಗಬಲ್ಲದೆ
ಆಡಿನ ಮರಿ ಆನೆ ಯಾಗಬಲ್ಲದೆ
ಸೀಳನಾಯಿ ಸಿಂಹದ ಮರಿಯಾಗಬಲ್ಲದೆ
ಅರಿವು ಆಚಾರ ಸಮ್ಯಜ್ಞಾನವನರಿಯದೆ
ನಾಯವ ಹೊತ್ತುಕೊಂಡು ತಿರುಗುವಗಾವಿಲರ
ಮುಖವ ನೋಡಲಾಗದು ಅಮುಗೇಶ್ವರ (ವಚನ 385)

ವ್ಯಕ್ತಿಯೋರ್ವನ ವ್ಯಕ್ತಿತ್ವ ತೀರ್ಮಾನವಾಗುವುದು ಅವನ ವಿಶಿಷ್ಟ ನಡವಳಿಕೆ ಮೂಲಕವಾಗಿದೆ. ಶ್ರೀಮಂತಿಕೆಯಾಗಲಿ, ಜ್ಞಾನವಾಗಲಿ, ವರ್ಣವಾಗಲಿ ಅಲ್ಲವೇ ಅಲ್ಲ. ಸರಳ ಸಜ್ಜನಿಕೆ ಸಮನ್ವಯದ ಸಮಸ್ತ ಪರಸ್ಪರ ಪ್ರೀತಿಯಿಂದ ಮಾತ್ರ.

ಜಾತಿ ಕುಲವನ್ನು ದಮನ ಮಾಡುವ ಸಮಗ್ರ ಪ್ರಯತ್ನದ ಚಿಂತನೆಯು ಶರಣರ ಬದುಕಿನ ಕನಸಾಗಿತ್ತು. ಅವರ ಪರಿಶ್ರಮವು ಸಮಾಧಾನಕರವಾದ ಸಂಗತಿಯಾಗಿದೆ.

ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನಯ್ಯ
ಕೀಳು ಓಹಿಲ ದೇವ ಕೀಳು ಕೀಳು ಉದ್ಬಟಯ್ಯ ಅಂಗಲ್ಲದೆ ಹಯನು ಕರೆಯದು ಕಾಣ ರಾಮನಾಥ (ವಚನ–438)

ಸಮಾಜದ ದೃಷ್ಟಿಯಿಂದ ಕೀಳಾದ ಅನೇಕ ಸಮುದಾಯಗಳು ಈಗಲೂ ನಮ್ಮ ಕಣ್ಮುಂದಿವೆ. ಮಾನವನಲ್ಲಿ ಅಂಧಕಾರವು ಮನೆ ಮಾಡಿಬಿಟ್ಟಿದೆ. ಹಾಗಾಗಿ ಅವನು ಇಹಲೋಕವನ್ನು ತ್ಯಜಿಸಿದಾಗ ಮಾತ್ರ ಈ ಅಜ್ಞಾನದ ಮಾಯೆ ಮಾಯವಾಗುತ್ತದೆ. ಆದರೆ ಈತ ಬದುಕಿದ ಸಂದರ್ಭದಲ್ಲಿ ಇಂತಹ ದುಷ್ಟತನದ ಅಸಂಖ್ಯಾತ ಬೀಜವನ್ನು ಬಿತ್ತಿ ಹೋಗುತ್ತಾನೆ ಇದರಿಂದ ಬರುವ ಬೆಳೆ ಅಥವಾ ಫಲ ಅದು ಘೋರವಾಗಿಯೇ ಗೋಚರವಾಗುತ್ತದೆ ವಿನಹ ಸರಳ ಸಾಮಾನ್ಯವಲ್ಲ.

ಕುಲವೆರಡಲ್ಲದೆ ಹಲವಿಲ್ಲ
ದಿನವೆರಡಲ್ಲದೆ ಸಪ್ತದಿನವಿಲ್ಲ
ಅರಿವು ಮರವೆಯೆರಡಲ್ಲದೆ
ಬೇರೊಂದು ತಡಿಗೆಯಿಲ್ಲ
ಅರ್ಕೇಶ್ವರಲಿಂಗ ಏಕರೂಪನಲ್ಲದೆ
ಬಹು ನಾಮದವನಲ್ಲ (ವಚನ–448)

ಕುಲದ ಕಲ್ಪನೆಯ ಚಿಂತನೆಯು ಬೇರುಬಿಟ್ಟು ಬಿಡಿಸಲಾರದ ಕಗ್ಗಂಟಾಗಿರುವುದು. ವಚನಕಾರರ ನಿಲುವಿನಲ್ಲಿ ಕುಲ ಅಥವಾ ಜಾತಿ ಎರಡೇ ಗಂಡು–ಹೆಣ್ಣು ಮಾತ್ರವಾಗಿವೆ. ನಮ್ಮ ನಮ್ಮ ಅನುಕೂಲಕ್ಕಾಗಿ ಸಾವಿರಾರು ಸಮಾಜ ನಿರ್ಮಿಸಿಕೊಂಡ ಕೀರ್ತಿಯು ಮಾನವನದ್ದಾಗಿದೆ. ಪ್ರತಿಯೊಂದು ಕ್ಷೇತ್ರದ ಮೇಲೆ ಹಿಡಿತವಿಟ್ಟುಕೊಂಡು ಯಜಮಾನ್ಯ ಸಂಸ್ಕೃತಿಯು ಕುಲವೆಂಬ ಇಬ್ಬಗೆಯ ನೀತಿಯಿಂದ ದೇವರು ಮತ್ತು ಧರ್ಮವನ್ನು ಆಳುತ್ತಿದೆ. ಯಾಕೆಂದರೆ ದೇವರೂ ಪ್ರತ್ಯಕ್ಷವಾದ ಅನೇಕ ಉದಾಹರಣೆಗಳನ್ನು ನಮ್ಮ ಪೌರಾಣಿಕ ಕಥೆ, ಕಾವ್ಯಗಳಲ್ಲಿ, ಎಲ್ಲಿಲ್ಲದ ಸ್ಥಾನವನ್ನು ಪಡೆಯುತ್ತವೆ. ಹಾಗಾಗಿ ಇಂದು ಏನಾದ್ರೂ ಯಾರಿಗಾದ್ರೂ ಪ್ರತ್ಯಕ್ಷವಾಗಿ ದೇವರು ಎಂದು ಹೇಳಿದರೆ ನೀನು ಯಾವ ಕುಲದ ಅಥವಾ ಜಾತಿಯ ದೇವರೆಂದು ಪ್ರಶ್ನೆ ಮಾಡುವ ಮಟ್ಟಕ್ಕೆ ಕುಲವೆಂಬ ವಿಚಾರವು ಜ್ಞಾನವಂತರಿಂದ ಹಿಡಿದು ಅಜ್ಞಾನವಂತರವರಿಗೆ ಬೇರೂರಿದೆ.

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ
ಲಿಂಗದ ಮೇಲೆ ನಿಷ್ಠೆ ಇಲ್ಲದ ಭಕ್ತ
ಇದ್ದಡೇನು ಸತ್ತಡೇನು ಶಿವ ಶಿವ ಕೂಡಲಸಂಗಮದೇವ ಕೇಳಾ
ಉಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ (ವಚನ–483)

ಭಕ್ತಿ ಭಾವದ ಶುದ್ಧ ಭಾವನೆಯು ಜಗತ್ತಿನಲ್ಲಿ ಪ್ರತಿಯೊಬ್ಬರು ಅವರವರ ನಿಷ್ಠೆ ಸಂಸ್ಕಾರ ಸಂಸ್ಕೃತಿಗೆ ಬಿಟ್ಟ ಸಂಗತಿಯಾಗಿದೆ. ಆದರೆ ಶರಣರ ದೃಷ್ಟಿಯಲ್ಲಿ ಪರಸ್ಪರರಲ್ಲಿ ಸ್ನೇಹ ನಂಬಿಕೆ ಹೊಂದಾಣಿಕೆಯಂತಹ ಮಾನವೀಯ ಸಂಬಂಧದ ಮೌಲ್ಯಗಳು ಹಳಸಬಾರದೆನ್ನುವ ಚಿಂತನೆಯನ್ನು ಮಾಡುತ್ತಾರೆ.

ಛಲಬೇಕು ಶರಣಂಗೆ ಪರಧನವನಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೋಲ್ಲೇನೆಂಬ
ಛಲಬೇಕು ಶರಣಂಗೆ ಲಿಂಗ ಜಂಗಮವನೊಂದೆಂಬ
ಛಲಬೇಕು ಶರಣಂಗೆ ಪ್ರಸಾದ ದಿಟವೆಂಬ
ಛಲಬೇಕು ಮೆಚ್ಚ ಕೂಡಲಸಂಗಮದೇವ (ವಚನ–524)

ಶ್ರೇಷ್ಠ ಕಾರ್ಯವನ್ನು ಸಾಧಿಸುವವನಿಗೆ ಗುರಿಯನ್ನುವುದು ಅವನ ಸಾಧನವಾಗುತ್ತದೆ. ಈ ಗುರಿಯ ಮುಟ್ಟಲು ಛಲವನ್ನೇ ಅವನ ವಾಹನವನ್ನಾಗಿ ಮಾಡಿಕೊಂಡು ಮುನ್ನುಗ್ಗುವಾಗ, ಅವನಿಗೆ ಪ್ರಥಮವಾಗಿ ಬೇಕಾಗಿರುವುದು ಛಲ ಇದೊಂದು ಅವನ ಮನದಲ್ಲಿದ್ದರೆ ಯಾವುದೇ ಜನೋಪಯೋಗಿ ಕಾರ್ಯವನ್ನು ಮಾಡಿ ತನ್ನ ಗುರಿ ಸಾಧಿಸಬಲ್ಲನು. ಆದರೆ ಈ ಶಕ್ತಿ ಸಾಮರ್ಥ್ಯವೆಂಬ ಛಲವನ್ನು ಅವನು ಉಪಯೋಗಿಸುವ ಬಗೆಯು ಅಷ್ಟೇ ಮುಖ್ಯವಾಗಿದೆ.

ಶಿವನ ಮೇಲಿನ ಅಗಾಧವಾದ ಪ್ರೀತಿ ಭಕ್ತಿ ಮಮಕಾರವನ್ನು ಅಚಲತೆಯಿಂದ ಸಂಬಂಧಿಕರಂತೆ ಕಾಣುತ್ತಾರೆ. ಜೀವನದಲ್ಲಿ ಶರಣನಾದವನು ಭಕ್ತನಾದವರು ಸಂಪೂರ್ಣ ತಮ್ಮನ್ನು ಸಮರ್ಪಣೆ ಭಾವನೆಯನ್ನು ತಾಳುತ್ತಾರೆ. ಇವರ ಬಗೆಯನ್ನು ಈ ಮುಂದಿನ ವಚನದಲ್ಲಿ ನೋಡಬಹುದು.

ತಂದೆ ನೀನು, ತಾಯಿ ನೀನು,
ಬಂದು ನೀನು, ಬಳಗ ನೀನು,
ನೀನಲ್ಲದೆ ಮತ್ತಾರು ಇಲ್ಲವಯ್ಯ ಕೂಡಲಸಂಗಮದೇವ
ಹಾಲಲ್ಲದ್ದು ನೀರಲ್ಲದು.

ತಂದೆ ತಾಯಿಗಳವರಿಗೆ ಹೋಲಿಕೆ ಮಾಡುವಂತಹ ವಸ್ತು ಜಗತ್ತಿನಲ್ಲಿ ಇಲ್ಲ. ಅವರು ಆಕಾಶದಷ್ಟು ಎತ್ತರ, ಭೂಮಿಯಷ್ಟು ಸಹಕಾರದ ಸಹನಾ ಮೂರ್ತಿಗಳಾಗಿದ್ದಾರೆ. ಅವರಿಗೆ ಸರಿಸಾಟಿ ಅವರಿಗವರೇ ಯಾಗಿರುವರು. ಆದರೂ ಇಡೀ ಬಾಳಿನುದ್ದಕ್ಕೂ ಸಹನೆಯಿಂದ, ಕರುಣೆ, ಹೃದಯವಂತಿಕೆಯಿಂದ ಅನೇಕ ತಪ್ಪನ್ನು ಮನ್ನಿಸಿ ಮಮಕಾರ ಮತ್ತು ಉದಾರ ಮೂರ್ತಿಯಾಗಿ ಕಷ್ಟದಲ್ಲಿ ಕೈ ಹಿಡಿದು ಮುನ್ನಡೆಸುವ ಶಕ್ತಿ. ಅದೇ ನಾವು ನಂಬಿರುವ ನಿರಾಕಾರ ಶಕ್ತಿಯಾದ ದೈವಶಕ್ತಿ ಹಾಗಾಗಿ ಈ ಮಹಾನ್ ಶಕ್ತಿಯನ್ನು ಪ್ರಸನ್ನತೆಯಿಂದ ತಂದೆ ತಾಯಿಗೆ ಹೋಲಿಸುತ್ತಾರೆ. ಇದರಿಂದಲಾದರೂ ಲೋಕದಲ್ಲಿ ತಂದೆ ತಾಯಿಗಳ ಪಾತ್ರವೂ ಅತ್ಯಂತ ಹಿರಿಯರಾದ ಚೇತನ ಶಕ್ತಿಯಾಗಿದೆ. ಮುಪ್ಪಿನ ಕಾಲದಲ್ಲಿ ಆಶ್ರಯ ಬಯಸುವಾಗಲಾದರೂ ಅವರಿಗೆ ನೆರವಾಗಲೆಂದು ರೂಢಿಸುವ ನೀತಿಯಾಗಿದೆ.ದೇವರಲ್ಲಿ ಭಯ–ಭಕ್ತಿಯಿಂದ ವರ್ತಿಸಿದಂತೆ ಇಳಿಹೊತ್ತಿನ ಜೀವಗಳಿಗೆ ಪ್ರತಿ ಹಂತದಲ್ಲಿ ಎಲ್ಲಾ ರೀತಿಯ ಕೋರಿಕೆ ಆಸೆ ಆಕಾಂಕ್ಷೆಯನ್ನು ಈಡೇರಿಸುವಂತಹ ಭಾವನೆಯನ್ನು ಪ್ರತಿಯೊಬ್ಬ ಮಕ್ಕಳಲ್ಲಿ ಬೇರೂರುವಂತೆ ಮಾಡುತ್ತಾರೆ.

ಸಾಹಿತ್ಯ, ಸಂಸ್ಕೃತಿ, ಸಮಾಜದಲ್ಲಿ ಆತ್ಮೀಯತೆಯ ಸಂಬಂಧಕ್ಕೆ ವಿಶಿಷ್ಟ ಸ್ಥಾನವಿರಬೇಕು. ಈ ಎಲ್ಲದರ ಪಾತ್ರವೂ ಅತ್ಯಂತ ಮಹತ್ವವನ್ನು ಪಡೆಯುತ್ತದೆ. ಮಾನವೀಯ ಮೌಲ್ಯಗಳು ಲೋಕನೀತಿಯಾಗಬೇಕು. ಈ ವಿಚಾರಧಾರೆಯಿಂದ ಪ್ರತಿಯೊಂದು ಮನಸ್ಸು ಪ್ರಕಾಶಿಸುವಂತಾಗಬೇಕು ಎಂಬುದನ್ನು ಈ ವಚನವು ಪ್ರತಿಪಾದಿಸುತ್ತದೆ.

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ
ಇವ ನಮ್ಮವ ಇವ ನಮ್ಮವ ಇವ ನಮ್ಮವ ನೆಂದೆನಿಸಯ್ಯ ಕೂಡಲಸಂಗಮದೇವ
ನಿಮ್ಮ ಮನೆಯ ಮಗ ನೆನೆಸಯ್ಯ (ಬಸವಣ್ಣನವರ ವಚನಗಳು ವಚನ–62)

ವಿಶ್ವಮಾನವ ಪರಿಕಲ್ಪನೆಯ ಬ್ರಾತೃತ್ವವನ್ನು ಈ ವಚನದಲ್ಲಿ ಕೊಡುತ್ತಾರೆ. ಪ್ರತಿಯೊಬ್ಬ ಮನುಷ್ಯರು ತಮ್ಮ ತಮ್ಮವರನ್ನು ಪರಸ್ಪರವಾಗಿ ಪ್ರೀತಿ ವಿಶ್ವಾಸದಿಂದ ಕಂಡು, ಇತರರನ್ನು ಅನ್ಯದೃಷ್ಟಿ ಅಥವಾ ಅಲಕ್ಷದಿಂದ ಕಾಣುತ್ತಾರೆ. ಅವರಿಗೆ ನಮ್ಮವರೇ, ಇವರು ಮನುಷ್ಯರು ಎನ್ನುವ ಮನೋಭಾವ ಬೆಳೆಸಿಕೊಳ್ಳುವ ಪರಿಯನ್ನು ವಿವರಿಸುತ್ತಾರೆ.

ಸಾರ ಸಜ್ಜನರ ಸಂಗಲೇಸು ಕಂಡಯ್ಯ
ದೂರ ದುರ್ಜನರ ಸಂಗವದು ಭಂಗವಯ್ಯ

ಸಂಗವೆರಡುಂಟು ಒಂದು ಬಿಡು ಒಂದು ಹಿಡಿ ಮಂಗಳ ಮೂರ್ತಿ ನಮ್ಮ ಕೂಡಲಸಂಗಮದೇವ (ಅದೇ ವಚನ–133)

ಸಂಸ್ಕಾರ, ಸಂಸ್ಕೃತಿಯುಳ್ಳವರು ಸಂಘವೇ ಶ್ರೇಷ್ಠ. ದುರ್ಜನರ ದುಷ್ಟರ ಸಂಗದಿಂದ ನಮ್ಮ ಮಾನವನ್ನೇ ನಾವೇ ಕಳೆದುಕೊಂಡಂತಾಗುವುದು. ಹೀಗೆ ಎರಡು ಮಾರ್ಗಗಳಿವೆ. ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು ಉಚಿತ. ಪುಣ್ಯ ಪಾಪವೆಂಬುವುದು ತಮ್ಮಷ್ಟೇ ಕಂಡೆರೆಯ್ಯಾ ಎಂದರೆ

ಅಯ್ಯಾ ಎಂದರೆ ಸ್ವರ್ಗ
ಎಲವೋ ಎಂದೊಡೆ ನರಕ
ದೇವ ಭಕ್ತ ಜಯ ಎಂಬ ನುಡಿಯೊಳಗೆ ಕೈಲಾಸಂಗಮದೇವ (ಅದೇ ವಚನ–2019)

ನಮ್ಮ ನಾಲಿಗೆ ಎಂಬ ಅಂಶವು ನಮ್ಮ ಗುಣ ನಡತೆಯ ಪ್ರತೀಕವಾಗಿದೆ. ಪರಸ್ಪರದಲ್ಲಿ ಗೌರವಯುತ ಭಾವವೇ ನಾವು ಸಂಪಾದಿಸುವ ಸ್ವರ್ಗ ನರಕ ಹಾಗಾಗಿ ನಮ್ಮ ಮಾತುಗಳು ಸರಳ ಮೃದು ಸಜ್ಜನಿಕೆ ವಿನಯದಿಂದ ಕೂಡಿರಬೇಕು.

ಸಾಮಾಜಿಕ ಧಾರ್ಮಿಕ ವಲಯಗಳಲ್ಲಿ ಮನ್ವಂತರವನ್ನು ಸೃಷ್ಟಿಸಿದ ಯುಗ ಶರಣರ ಯುಗ. 11–12ನೇ ಶತಮಾನಗಳು ಕರ್ನಾಟಕದಿಂದ ಹಿಡಿದು ವಿಶ್ವಮಟ್ಟಕ್ಕೆ ತನ್ನದೆಯಾದ ಛಾಪು ಮೂಡಿಸಿದ ಸಂದರ್ಭವದು. ಸಮಾಜದಲ್ಲಿ ಆಳವಾಗಿ ಬೇರೂರಿರುವ ಜಾತೀಯತೆ, ಅಂಧತ್ವ, ಮೌಢ್ಯತೆ, ಢಾಂಬಿಕತೆ, ಲಿಂಗ ಅಸಮಾನತೆಗಳಂತಹ ದುಷ್ಟ ಪದ್ಧತಿಗಳನ್ನು ತಮ್ಮ ವೈಚಾರಿಕತೆಯ ದೃಷ್ಟಿಯಿಂದ ಆಧ್ಯಾತ್ಮಿಕ ಮಾರ್ಗದಲ್ಲಿ ಪ್ರತಿಯೊಬ್ಬರನ್ನು ಸರಿದಾರಿಗೆ ತರಲು ಕನ್ನಡ ನಾಡಿನಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ಬದುಕಿಗೆ ಹೊಸ ತಿರುವನ್ನುಂಟು ಮಾಡಿತು.

ವಚನ ಸಾಹಿತ್ಯವು ಸರಳ ಸಾಮಾನ್ಯರ ಭಾಷೆಗೆ ಮುನ್ನುಡಿಯನ್ನು ಹಾಕುತ್ತದೆ. ಅನೇಕ ಶಿವಶರಣರ ಶರಣೆಯರು ತಮಗೆ ಅನಿಸಿದ ಸಾಮಾಜಿಕ, ಧಾರ್ಮಿಕ, ಆದ್ಯಾತ್ಮಿಕ ಮೌಲ್ಯಗಳನ್ನು ಈ ಸಾಹಿತ್ಯ ಪ್ರಕಾರಗಳಲ್ಲಿ ರೂಪಗೊಳಿಸಲು ತಮ್ಮನ್ನು ತೊಡಗಿಸಿಕೊಂಡು ನೇರವಾದ ಮಾತುಗಳಲ್ಲಿ ಅವರವರ ವಿಚಾರಧಾರೆಯನ್ನು ಹಿಡಿದಿಡುವ ಪ್ರಯತ್ನವನ್ನು ಮಾಡಿರುವ ಮಹಾನ್ ಕಾರ್ಯ ಸಾಧನೆಯು ಸರಳ ಮತ್ತು ಸಾಮಾನ್ಯವಾದುದಲ್ಲ.

## ಆಧಾರ ಗ್ರಂಥಗಳು

1. ವಚನ ಸಾವಿರ – ಸಂಪಾದಕ ಪ್ರೊ. ಓ. ಎಲ್. ನಾಗಭೂಷಣಸ್ವಾಮಿ, ಕನ್ನಡ ವಿಶ್ವವಿದ್ಯಾಲಯ ಹಂಪಿ–2014
2. ವಚನ ಸಾಹಿತ್ಯ – ಪಿ. ವಿ. ನಾರಾಯಣ – ವೀರಶೈವ ಅಧ್ಯಯನ ಸಂಸ್ಥೆ – ಗದಗ – 1983
3. ಬಸವಣ್ಣನವರ ವಚನಗಳು – ಪರಮೇಶ್ವರ ಹನ್ಮತಿ ಅನಂತ ಪಬ್ಲಿಕೇಶನ್, ಬೆಂಗಳೂರು–2017
4. ವಚನ ಚಳುವಳಿ – ಡಾ. ಎಚ್. ತಿಪ್ಪೇರುದ್ರಸ್ವಾಮಿ – ಶರಣ ಬಸವೇಶ್ವರರ ಗ್ರಂಥ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ–1987